ಜಲಪಾತಗಳು ಪ್ರವಾಸಿ ತಾಣಗಳಾಗಿ ಪರಿವರ್ತನೆ

202 ಶ್ರೀ ಧ್ರುವನಾರಾಯಣ್.ಆರ್ (ಕೊಳ್ಳೇಗಾಲ)

ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು

ಅ) ಗಗನಚುಕ್ಕಿ ಮತ್ತು ಭರಚುಕ್ಕಿ ಜಲಪಾತಗಳನ್ನು ಪ್ರಮುಖ ಪ್ರವಾಸಿ ತಾಣಗಳನ್ನಾಗಿ ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಭರಚುಕ್ಕಿ ಜಲಪಾತ ಪ್ರದೇಶದಲ್ಲಿ ಪ್ರವಾಸಿ ಸೌಲಭ್ಯಗಳನ್ನು ಅಳವಡಿಸಲು ಇಲಾಖೆಯು ಕಾರ್ಯಯೋಜನೆಯನ್ನು ರೂಪಿಸಲಾಗಿದ್ದು, ಇದಕ್ಕಾಗಿ ಕೇಂದ್ರ ಧನಸಹಾಯವಾಗಿ ರೂ.431.85ಲಕ್ಷಗಳು ಮಂಜೂರಾಗಿರುತ್ತದೆ. ರೂ.345.48ಲಕ್ಷಗಳನ್ನು ಮೊದಲ ಕಂತಾಗಿ ಕೇಂದ್ರವು ಬಿಡುಗಡೆ ಮಾಡಿರುತ್ತದೆ. ಈ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಇಲಾಖೆಯು ಗುರುತಿಸಿದ್ದ ಜಮೀನು ದೊರಕಿದ ಕೂಡಲೇಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಆ) ಪ್ರವಾಸಿಗರನ್ನು ಈ ಜಲಪಾತಗಳಿಗೆ ಆಕರ್ಷಿಸಲು ಜಲಪಾತೋತ್ಸವದಂತಹ ಕಾರ್ಯಕ್ರಮಗಳನ್ನು ಯಾವಾಗ ಆಯೋಜಿಸಲಾಗುವುದು;

ಜಲಪಾತೋತ್ಸವವನ್ನು ನಡೆಸುವ ಬಗ್ಗೆ ಜಿಲ್ಲಾಡಳಿತಗಳು ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ. ಇಲಾಖೆಯಿಂದ ಈ ಉತ್ಸವಗಳಿಗೆ ಸ್ವಲ್ಪಮಟ್ಟಿನ ಸಹಾಯಧನ ಒದಗಿಸಲಾಗುವುದು.

ಇ) ಹೊಗೇನಕಲ್ ಜಲಪಾತವನ್ನು ಪ್ರವಾಸಿ ತಾಣವಾಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಚಾಮರಾಜನಗರ ಜಿಲ್ಲೆಯ ಹೊಗೇನಕಲ್ ಜಲಪಾತ ಪ್ರದೇಶದಲ್ಲಿ ಸ್ನಾನಗೃಹಗಳು, ಶೌಚಾಲಯ, ಬಟ್ಟೆ ಬದಲಿಸುವ ಕೋಣೆಗಳು, ವಾಹನ ನಿಲ್ದಾಣ, ಪರಗೋಲಗಳ ನಿರ್ಮಾಣ, ಇಂಟರ್ ಪ್ರಿಟೇಷನ್ ಸೆಂಟರ್, ಉಪಹಾರಗೃಹಗಳ ನಿರ್ಮಾಣ, ಬೋಟಿಂಗ್ ಸೌಲಭ್ಯ ಒದಗಿಸಲು ಫ್ಲಾಟ್ ಫಾರಂ ನಿರ್ಮಾಣ, ವಾಚ್ ಟವರ್ ನಿರ್ಮಾಣ ತಂತಿಬೇಲಿ ನಿರ್ಮಾಣ, ಪ್ರವಾಸಿ ಮಾರ್ಗದರ್ಶಿ ಫಲಕಗಳು ಹಾಗೂ ಟ್ರಕ್ಕಿಂಗ್ ಟ್ರಯಲ್ಸ್ ಅಭಿವೃದ್ಧಿಪಡಿಸಲು ರೂ.50.00ಲಕ್ಷಗಳನ್ನು 2008–09ನೇ ಸಾಲಿನಲ್ಲಿ ಅರಣ್ಯ ಇಲಾಖೆಗೆ ಬಿಡುಗಡೆ ಮಾಡಲಾಗಿದೆ.